# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಎಂವೈಎಸ್\1096\2017\ಸನಿಕಾಸ-1 ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:16/10/2017

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ**

<u>ವಿಷಯ:</u> ದೂರುದಾರರಾದ ಶ್ರೀ.ಜಿ.ಎಂ.ಮಹದೇವ ಬಿನ್ ವಡಗಾಲಯ್ಯ, ನಂ.131, ಟಿ.ನರಸೀಪುರ ಮುಖ್ಯ ರಸ್ತೆ, ರಾಷ್ಟ್ರ ಕ್ರಾಂತಿ ನಗರ, ನಾದನಹಳ್ಳಿ, ಮೈಸೂರು ರವರ ದೂರನ್ನು ಪರಿಹರಿಸುವ ಬಗ್ಗೆ.

*******

ಮೈಸೂರು ಜಿಲ್ಲೆ ನಾದನಹಳ್ಳಿ ರಾಷ್ಟ್ರಕ್ರಾಂತಿ ನಗರದ ಟಿ.ನರಸೀಪುರ ಮುಖ್ಯ ರಸ್ತೆಯ ಸರ್ವೆ ನಂ.131ರ ನಿವಾಸಿಯಾದ ಶ್ರೀ.ಜಿ.ಎಂ.ಮಹದೇವ ಬಿನ್ ವಡಗಾಳಯ್ಯ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಮೈಸೂರು ಜಿಲ್ಲೆ ಮತ್ತು ತಾಲ್ಲೂಕ್ 1) ತಹಶೀಲ್ದಾರಾದ ಶ್ರೀ.ರಮೇಶ್ ಬಾಬು ಮತ್ತು 2) ಮೈಸೂರು ಉಪ ವಿಭಾಗದ ಉಪವಿಭಾಗಾಧಿಕಾರಿ [ಇನ್ನು ಮುಂದೆ "1 ಮತ್ತು 2ನೇ ಎದುರುದಾರರು" ಎಂದು ಕ್ರಮವಾಗಿ, ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ಮೈಸೂರು ತಾಲ್ಲೂಕ್ ನಾಡಹಳ್ಳಿ ಗ್ರಾಮದ ಸರ್ವೆ ನಂ.131ರಲ್ಲಿ 2 ಎಕರೆ ಮತ್ತು ಸರ್ವೆ ನಂ.118ರಲ್ಲಿ 1 ಎಕರೆ 7 ಗುಂಟೆ, ಒಟ್ಟು 3 ಎಕರೆ 7 ಗುಂಟೆ ಸರ್ಕಾರಿ ಜಮೀನಿಗೆ ದಿ:02/12/15ರಂದು ಎದುರುದಾರರು ಮತ್ತು ತಾಲ್ಲೂಕ್ ಭೂ ಮಾಪಕರು ಸರ್ವೆ ನಕ್ಷೆ ತಯಾರಿಸಿ, ಪ್ರಸ್ತಾವನಾ ವರದಿಯನ್ನು ಉಪವಿಭಾಗಾಧಿಕಾರಿಗಳಿಗೆ ಕಳುಹಿಸಿ ಕೊಡದೇ ವಿಳಂಬ ಮಾಡಿದ್ದಾರೆ. ಇದರಿಂದ, ಪರಿಶಿಷ್ಟ ಜನಾಂಗದ ನಿವೇಶನ ರಹಿತರಿಗೆ ತೊಂದರೆ ಉಂಟಾಗಿದೆಯೆಂದು ಹೇಳಿದ್ದಾರೆ.

3. ದೂರಿನ ಬಗ್ಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ-

ಸದರಿ ಜಮೀನುಗಳನ್ನು ಆಶ್ರಯ ಯೋಜನೆ ಅಡಿ ನಿವೇಶನ ನೀಡಬೇಕೆಂದು ಕೋರಿದ್ದು, ರಾಜಸ್ವ ನಿರೀಕ್ಷಕರು ಮತ್ತು ಗ್ರಾಮ ಲೆಕ್ಕಾಧಿಕಾರಿಗಳಿಂದ ವರದಿ ಪಡೆಯಲಾಗಿ ಪಹಣಿ ಪತ್ರಿಕೆಯಂತೆ ಸರ್ವೆ ನಂ.118ರಲ್ಲಿ 1 ಎಕರೆ 7 ಗುಂಟೆ ಜಮೀನು ಗುಂಡು ತೋಪಾಗಿದೆ ಹಾಗೂ ಸರ್ವೆ ನಂ.131ರಲ್ಲಿ 2 ಎಕರೆ ಜಮೀನು ಸರ್ಕಾರಿ ಖರಾಬಾಗಿದ್ದು, ಸದರಿ ಜಮೀನಿನಲ್ಲಿ ಶ್ರೀ.ಮೊಹಮ್ಮದ್ ಇಸ್ಮಾಯಿಲ್ ಹಾಗೂ

ಇತರರಿಗೆ ಪಂಚಾಯತ್‌ನಿಂದ ಖಾತೆಯಾಗಿದೆ. ಅಲ್ಲದೇ, ಸದರಿ ಜಮೀನಿಗೆ ಸಂಬಂಧಪಟ್ಟಂತೆ 2ನೇ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಅಸಲು ದಾವಾ ಸಂ.867/2017ರಂತೆ ಪ್ರಕರಣ ದಾಖಲಾಗಿ ಪ್ರಸ್ತುತ ವಿಚಾರಣಾ ಹಂತದಲ್ಲಿದೆ. ಆಶ್ರಯ ಯೋಜನೆ ಅಡಿ ನಿವೇಶನಕ್ಕಾಗಿ ಮಂಜೂರು ಮಾಡಲು ತಾಲ್ಲೂಕ್ ಪಂಚಾಯತ್‌ನಿಂದ ಫಲಾನುಭವಿಗಳ ಪಟ್ಟಿಯ ಸಹಿತ ಕೋರಿಕೆ ಬಂದ ನಂತರ ನಿವೇಶನ ಮಂಜೂರು ಮಾಡಲು ಜಮೀನು ಗುರುತಿಸಿ, ಮೇಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲಾಗುವುದೆಂದು ಹೇಳಿದ್ದಾರೆ.

4. ಎರಡನೇ (2ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ನಿವೇಶನ ರಹಿತರಿಗೆ ತ್ವರಿತವಾಗಿ ವಸತಿಗೆ ಯೋಗ್ಯವಾದ ಸರ್ಕಾರಿ ಜಮೀನನ್ನು ಮಂಜೂರು ಮಾಡಲು ಮತ್ತು ಯೋಗ್ಯವಾದ ಸರ್ಕಾರಿ ಜಮೀನು ಲಭ್ಯವಿದ್ದಲ್ಲಿ, ಸದರಿ ಜಮೀನನ್ನು ಗುರುತಿಸಲು ತಾಲ್ಲೂಕ್ ಮಟ್ಟದ ವಸತಿ ಸಮಿತಿಯನ್ನು ರಚಿಸಿದೆ. ಅಲ್ಲದೇ, ಗ್ರಾಮ ಪಂಚಾಯತ್ ಮಟ್ಟದಲ್ಲಿ ಉಪ ಸಮಿತಿಯನ್ನು ರಚಿಸಿದೆ. ಸದರಿ ಸಮಿತಿಯಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳು, ತಹಶೀಲ್ದಾರ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಮೋಜಣಿದಾರರು ಇದ್ದಾರೆ. ಸದರಿ ಜಮೀನುಗಳಲ್ಲಿ ನಿವೇಶನ ರಹಿತರಿಗೆ ಮಂಜೂರು ಮಾಡುವ ಸಲುವಾಗಿ ತಾಲ್ಲೂಕ್ ಪಂಚಾಯತ್ ವತಿಯಿಂದ ಸಂಬಂಧಪಟ್ಟ ಗ್ರಾಮ ಪಂಚಾಯತ್‌ನ ಠರಾವು, ನಿವೇಶನ ರಹಿತ ಪಟ್ಟಿ ಈ ಹಿಂದೆ ಸರ್ಕಾರದಿಂದ ಹಂಚಿಕೆಗೆ ಭೂ ಸ್ವಾಧೀನದ ಮೂಲಕ ಪಡೆದ ಜಮೀನು ಮತ್ತು ರಚಿಸಿ ಹಂಚಿಕೆ ಮಾಡಲಾದ ನಿವೇಶನಗಳ ವಿವರಗಳು ಸೇರಿದಂತೆ ಪ್ರಸ್ತಾವನೆ ಬಂದಿಲ್ಲ. ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ತಹಶೀಲ್ದಾರ್ ರವರಿಗೆ ಈಗಾಗಲೇ ಪತ್ರ ಬರೆದಿದ್ದು, ಪ್ರಸ್ತಾವನೆ ಬಂದಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದೆಂದು ಹೇಳಿದ್ದಾರೆ.

5. ಎದುರುದಾರರ ಆಕ್ಷೇಪಣೆಗಳಿಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಎದುರುದಾರರ ಆಕ್ಷೇಪಣೆಯ ಅಂಶಗಳನ್ನು ಅಲ್ಲಗಳೆದು, ದೂರಿನ ಅಂಶಗಳನ್ನೇ ಪುನರುಚ್ಛರಿಸಿದ್ದಾರೆ.

6. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ಸರ್ವೆ ನಂ.118ರ ಜಮೀನು ಗುಂಡು ತೋಪು ಜಮೀನಾಗಿದೆ. ಅದೇ ರೀತಿ, ಸರ್ವೆ ನಂ.131ರ ಜಮೀನು ಶ್ರೀ.ಮೊಹಮ್ಮದ್ ಇಸ್ಮಾಯಿಲ್ ಮತ್ತು ಇತರರಿಗೆ ಪಂಚಾಯತ್‌ನಿಂದ ಮಂಜೂರಾಗಿರುವ ಬಗ್ಗೆ ತಿಳಿಸಿದ್ದಾರೆ. ಅದೇ ರೀತಿ, ಸದರಿ ಜಮೀನಿಗೆ ಸಂಬಂಧಪಟ್ಟಂತೆ, ಮೈಸೂರು ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಅಸಲು ದಾವಾ ಸಂ:867/2017ರಂತೆ ಪ್ರಕರಣ ದಾಖಲಾಗಿ, ಪ್ರಸ್ತುತ ವಿಚಾರಣಾ ಹಂತದಲ್ಲಿರುವುದಾಗಿ ಹೇಳಿದ್ದಾರೆ, ಆದರೆ ಈ ಬಗ್ಗೆ ಯಾವುದೇ ದಾಖಲೆಗಳಿಲ್ಲ. ಸದರಿ

Sd/-

MYS/1096/2017

ಜಮೀನುಗಳಲ್ಲಿ ನಿವೇಶನ ಹಂಚಿಕೆ ಮಾಡುವ ಸಂಬಂಧ ಈಗಾಗಲೇ ಸರ್ಕಾರದ ಮುಖ್ಯ ಪ್ರಧಾನ ಕಾರ್ಯದರ್ಶಿಗಳು ಹಾಗೂ ಮೈಸೂರು ಜಿಲ್ಲಾಧಿಕಾರಿಗಳು ಸದರಿ ಜಮೀನುಗಳನ್ನು ಆಯ್ಕೆ ಮಾಡಿದ್ದು, ಅದರಂತೆ ಸದರಿ ಜಮೀನುಗಳಲ್ಲಿ ನಕ್ಷೆ ತಯಾರಿಸಲಾಗಿದೆ. ಆದರೆ, ಸದರಿ ಜಮೀನುಗಳಿಗೆ ಸಂಬಂಧಪಟ್ಟಂತೆ, ಫಲಾನುಭವಿಗಳ ಪಟ್ಟಿಯನ್ನು ತಯಾರು ಮಾಡುವ ಅಧಿಕಾರ ತಾಲ್ಲೂಕ್ ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳಿಗೆ ಇದ್ದು, ಸದರಿಯವರು ಫಲಾನುಭವಿಗಳ ಪಟ್ಟಿಯನ್ನು ತಯಾರಿಸಿ ಸದರಿ ಪಟ್ಟಿಯನ್ನು ಕಂದಾಯ ದಾಖಲೆಗಳ ಜೊತೆ 2ನೇ ಎದುರುದಾರರ ಮುಂದೆ ಹಾಜರುಪಡಿಸುವುದು 1ನೇ ಎದುರುದಾರರ ಕರ್ತವ್ಯವಾಗಿದೆ. ಆದರೆ, 1ನೇ ಎದುರುದಾರರು ಈ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೇ ಹಾಗೂ ಸದರಿ ನಿವೇಶನಕ್ಕೆ ಸಂಬಂಧಪಟ್ಟಂತೆ ಕಡತಗಳನ್ನು ಮೇಲಾಧಿಕಾರಿಗಳ ಮುಂದೆ ಹಾಜರುಪಡಿಸದೇ ಕರ್ತವ್ಯ ಲೋಪ ಎಸಗಿದ್ದಾರೆ. 2ನೇ ಎದುರುದಾರರು ಸದರಿ ನಿವೇಶನಗಳನ್ನು ಹಂಚಿಕೆ ಮಾಡುವ ಅಧಿಕಾರವಿದ್ದು, ಸದರಿಯವರು 1ನೇ ಎದುರುದಾರರಿಂದ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಕೋರಿದ್ದಾರೆ. ಆದರೆ, 1ನೇ ಎದುರುದಾರರು ಈ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೇ ಕರ್ತವ್ಯ ಲೋಪ ಎಸಗಿರುವುದು ಕಂಡು ಬಂದಿದೆ.

8. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ 1ನೇ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ಇಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಕ್ರಮ ಕೈಗೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

9. ಆದ್ದರಿಂದ, ನಿವೇಶನ ರಹಿತ ಫಲಾನುಭವಿಗಳಿಗೆ ಸರ್ಕಾರದಿಂದ ನಿವೇಶನ ಮಂಜೂರು ಮಾಡುವ ಬಗ್ಗೆ ಕಾನೂನು ರೀತಿ ಸೂಕ್ತ ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

10. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

Sd/-

(ನ್ಯಾಯಮೂರ್ತಿ ಸುಬಾಷ್ ಬಿ ಅಡಿ)
ಉಪಲೋಕಾಯುಕ್ತ-2,
ಕರ್ನಾಟಕ ರಾಜ್ಯ.